15

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 28/1/2021

# ಹೊಸ ಶಾಸನವೇ ಮದ್ದು

ಮೇಲ್ಮನೆಯಲ್ಲಿ ನಡೆದ ಗಲಾಟೆ ನಿಜಕ್ಕೂ ಅನಪೇಕ್ಷಿತ ಹಾಗೂ ಅನಿರೀಕ್ಷಿತ. ಸದನದಲ್ಲಿ ಇಂತಹದೊಂದು ಕೀಳುದರ್ಜೆಯ ಘಟನೆ ನಡೆಯುತ್ತದೆ, ಸದಸ್ಯರು ಮೂರನೇ ದರ್ಜೆಯಲ್ಲಿ ವರ್ತಿಸುತ್ತಾರೆಂಬ ಕಲ್ಪನೆಯೂ ಕೂಡ ಯಾರಿಗೂ ಇರಲಿಲ್ಲ. ಆದರೀಗ ಘಟನೆ ಜರುಗಿಬಿಟ್ಟಿದೆ. ಸದನದ ಒಳಗೆ ನಡೆಯುವ ಎಲ್ಲಾ ಘಟನಾವಳಿಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಅಧಿಕಾರವಿರುವುದು ಸಭಾಪತಿಗಳಿಗೆ ಮಾತ್ರ. ಸದಸ್ಯರೊಬ್ಬರು ಮತ್ತೊಬ್ಬ ಸದಸ್ಯರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದರೆ ಅದು ಕ್ರಿಮಿನಲ್ ಅಪರಾಧವಾಗಿ ಪೊಲೀಸರು ಅಂತಹ ನಡವಳಿಕೆ ತೋರಿದವರ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಈಗ ನಡೆದಿರುವುದು ಸದನದ ನಡಾವಳಿಗೆ ಸಂಬಂಧಿಸಿದ ಘಟನೆ.



ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ವಿಚಾರವಾಗಿ ಉಪಸಭಾಪತಿಯಾದವರು ಸಭಾಪತಿ ಪೀಠದಲ್ಲಿ ಕೂರಬೇಕೇ? ಬೇಡವೇ? ಎಂಬುದಕ್ಕೆ ಸಂಬಂಧಿಸಿದಂತೆ ಈ ಎಳೆದಾಟ, ಗದ್ದಲ ನಡೆದಿದೆ. ಹಾಗಾಗಿ ಪೊಲೀಸರು ಕ್ರಮ ಕೈಗೊಳ್ಳಲಾಗದು. ಇನ್ನು ಸಭಾಪತಿ ಅವರ ಅನುಪಸ್ಥಿತಿಯಲ್ಲಿ ಈ ಘಟನೆ ನಡೆದಿರುವುದರಿಂದ ಅವರೂ ಸಹ ನೇರವಾಗಿ ಕ್ರಮ ಕೈಗೊಳ್ಳಲು ಅವಕಾಶವಿಲ್ಲ. ಇದೊಂದು ಬಗೆಯ ಸಂದಿಗ್ಧ ಪರಿಸ್ಥಿತಿ-ವಿಚಿತ್ರ ಸಂದರ್ಭ. ಹಾಗಾಗಿ ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸದಂತೆ ಏನು ಮಾಡಬೇಕು? ಹೇಗೆ ಮೇಲ್ಮನೆಯ ಘನತೆಯನ್ನು ಪುನರ್ ಸ್ಥಾಪಿಸಬೇಕು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಿದು ಸಕಾಲ.

ಆ ದೆಸೆಯಲ್ಲಿ ಹೊಸ ಶಾಸನವನ್ನು ರೂಪಿಸುವ ಅಗತ್ಯ ಹೆಚ್ಚು ಕಂಡುಬಂದಿದೆ. ಇಂತಹ ಪ್ರಕರಣಗಳನ್ನು ಹತ್ತಿಕ್ಕಲೆಂದೇ ಪ್ರತ್ಯೇಕ ಶಾಸನ ರಚನೆಯ ಅಗತ್ಯವಿದೆ. ಆ ದೆಸೆಯಲ್ಲಿ ಸಂವಿಧಾನತಜ್ಞರು, ಕಾನೂನು ರೂಪಿಸುವವರು ಚಿಂತನೆ ನಡೆಸಬೇಕು. ಆಗ ಕಾನೂನು ರೂಪಿಸುವವರೇ ಕಾನೂನನ್ನು ಬೇಕಾಬಿಟ್ಟಿಯಾಗಿ ಮುರಿಯುವ ನಡವಳಿಕೆಗೆ ಕಡಿವಾಣ ಬೀಳುತ್ತದೆ.

■ **ಬಿ.ವಿ.ಆಚಾರ್ಯ** | ಹಿರಿಯ ನ್ಯಾಯವಾದಿ ಹಾಗೂ ಮಾಜಿ ಅಡ್ವೊಕೇಟ್ ಜನರಲ್

# ಭವಿಷ್ಯ ಸಂಕಷ್ಟದಲ್ಲಿ

ಮೇಲ್ಮನೆಯ ಮೌಲ್ಯಗಳು ಮತ್ತು ಉದ್ದೇಶಗಳು ನಿಜವಾಗಿಯೂ ಕಾರ್ಯ ರೂಪಕ್ಕೆ ಬರಬೇಕು ಎಂದಾದರೆ ಇತರ ಎಲ್ಲಾ ಕಾರಣಗಳು, ನೆಪಗಳಿಗಿಂತ ಪ್ರಮುಖವಾದದ್ದು ರಾಜಕೀಯ ಪಕ್ಷಗಳ ಆತ್ಮಸಾಕ್ಷಿಯ ನಡವಳಿಕೆ. ಕೆಲವು ದಶಕಗಳಿಂದ ರಾಜಕೀಯ ಪಕ್ಷಗಳಲ್ಲಿ ಕಾಣದಿರುವ ನಿಷ್ಠೆ ಮೇಲ್ಮನೆಯ ಉದ್ದೇಶ ಸಾಧಿಸುವಲ್ಲಿ ಬದ್ಧತೆಯ ಕೊರತೆ ಎದ್ದು ಕಾಣುತ್ತಿದೆ. ಇದೇನು ಹೊಸ ಬೆಳವಣಿಗೆಯೂ ಅಲ್ಲ. ಮೇಲ್ಮನೆಯ ಸದಸ್ಯತ್ವ ಕುರಿತಂತೆ ಸಂವಿಧಾನದ 171ನೇ ಅನುಚ್ಛೇದದ ಆದೇಶ-ಮಾರ್ಗಸೂಚಿಗಳನ್ನು ಉಡಾಫೆಯಿಂದಲೇ ಕಡೆಗಣಿಸಿರುವುದು ಒಂದು ಸಂಪ್ರದಾಯವಾಗಿಬಿಟ್ಟಿದೆ.




ಪಕ್ಷಗಳ ಶಕ್ತಿರಾಜಕೀಯದ ಆಂತರಿಕ ಬಿಕ್ಕಟ್ಟಿನ ಸನ್ನಿವೇಶಗಳ ಪರಿಹಾರಕ್ಕೆ ಮೇಲ್ಮನೆಯ ಸದಸ್ಯತ್ವದ ಕೊಡುಗೆ ನೀಡುವುದು ಪರಿಷತ್ತಿನ ಬೌದ್ಧಿಕ ಅಧಃಪತನಕ್ಕೆ ಕಾರಣ. ತಮ್ಮ ತಮ್ಮ ಜಾತಿಬಾಂಧವರು, ಖಾಸಗಿ ಭಕ್ತರು, ಪಕ್ಷಕ್ಕೆ ಆಕರ್ಷಕ ಮೊತ್ತವನ್ನು ದೇಣಿಗೆಯಾಗಿ ನೀಡುವವರು ಹಾಗೂ ತರುವವರು ಮಾತ್ರವೇ ಎಲ್ಲದ್ದಕ್ಕಿಂತ ಮುಖ್ಯವಾಗಿದೆಯೇ ಹೊರತು, ಸಂವಿಧಾನದ ಆದೇಶವಂತೂ ಖಂಡಿತಾ ಅಲ್ಲ. ಈ ಬೆಕ್ಕಿಗೆ ಘಂಟೆ ಕಟ್ಟುವವರು ಯಾರು? ಮನಃ ಅದೇ ನಾಯಕರುಗಳು, ಹೈ ಕಮಾಂಡ್ ಇತ್ಯಾದಿ ಆಗಿರುವುದರಿಂದ ಬೆಕ್ಕೂ ಇಲ್ಲ, ಘಂಟೆಯೂ ಇಲ್ಲ!

ವಿಧಾನ ಮಂಡಲದ ನಾಯಕರು ವಿಧಾನ ಪರಿಷತ್ತನ್ನು "ಸ್ವತಂತ್ರ ಸದನ" ವೆಂದು ಪರಿಗಣಿಸಿರುವುದು ಅತ್ಯಂತ ಅಪರೂಪ. ಮೇಲ್ಮನೆಯ ಪಕ್ಷದ ಸದಸ್ಯರು, ಮತ್ತಿತರ ಪದಾಧಿಕಾರಿ ಗಳು ಸದನದ ಮುಂದೆ ಬರುವ ವಿಷಯಗಳ ಕುರಿತು ಯಾವ ನಿಲುವು ತೆಗೆದುಕೊಳ್ಳುವುದು ಅಥವಾ ಕೂಡದು, ಸದನದಲ್ಲಿ ಧರಣಿ, ವಾಕ್ ಔಟ್, ಇತ್ಯಾದಿ ಕುರಿತಂತೆ ಕೆಳಮನೆಯಿಂದ ಆಗಾಗ ಆದೇಶಗಳು ಬರುವುದೂ ಒಂದು ಸಂಪ್ರದಾಯವೇ ಆಗಿಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಕಾಯ್ದೆಗಳ ಹಾಗೂ ಸಾರ್ವಜನಿಕವಾಗಿ ಮಹತ್ವವಾದ ವಿಷಯಗಳ ಮುಕ್ತ ಚರ್ಚೆ ಕಷ್ಟವಲ್ಲವೇ? ಇನ್ನು ಸದಸ್ಯರ ಶಿಸ್ತು-ಸಂಯಮದ ವಿಚಾರ ಈಗಾಗಲೇ ಸಾಕಷ್ಟು ಜನಜನಿತವಾಗಿದೆ.

■ **ಪ್ರೊ. ಬಿ.ಕೆ.ಚಂದ್ರಶೇಖರ್** | ಮಾಜಿ ಸಭಾಪತಿ

# ರಾಜಕೀಯ ಪ್ರತಿಷ್ಠೆಯ ಕೈಗೊಂಬೆ

ಪಕ್ಷ ರಾಜಕೀಯ ಪ್ರತಿಷ್ಠೆ ಒಮ್ಮೊಮ್ಮೆ ಸಾಂವಿಧಾನಿಕ ಸ್ಥಾನಮಾನಗಳಿಗೂ ಸಂಕಷ್ಟತಂದಿಡುತ್ತದೆ. ಅಂತಹ ಒಂದು ಸಂದಿಗ್ಧತೆಗೆ ಸಿಲುಕಿದವರು ವಿಧಾನ ಪರಿಷತ್ ಸಭಾಪತಿ ಕೆ. ಪ್ರತಾಪ ಚಂದ್ರಶೆಟ್ಟಿ ಅವರು. ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಶೆಟ್ಟಿ ಅವರು ಅವಿರೋಧವಾಗಿ ಮೇಲ್ಮನೆ ಸಭಾಪತಿಯಾದವರು. ರಾಜಕೀಯ ಸ್ಥಿತ್ಯಂತರದಲ್ಲಿ ಸ್ಥಾನಕ್ಕೆ ಕುಂದು ಬಂದರೂ ರಾಜಕೀಯ ಪ್ರತಿಷ್ಠೆಗೆ ಪಕ್ಷದ ನಾಯಕರು ಅವರನ್ನು ಕುರ್ಚಿಗಂಟಿ ಕೂರುವಂತೆ ಮಾಡಿದ್ದರು. ಸಂಖ್ಯಾಬಲ ಇಲ್ಲದಿದ್ದಲ್ಲಿ ಕ್ಷಣವೂ ಸಭಾಪತಿ ಪೀಠದಲ್ಲಿ ಕೂರಲ್ಲ ಎಂದರೂ ರಾಜಕೀಯ ಒಳಸುಳಿಯೊಳಗೆ ಅದು ಸಾಧ್ಯವಾಗಲಿಲ್ಲ. ಬಿಜೆಪಿ-ಜೆಡಿಎಸ್ ಅವಿಶ್ವಾಸ ನಿರ್ಣಯ ತಂದು ಇಳಿಸುವ ಪ್ರಯತ್ನವೂ ತಾಂತ್ರಿಕ ಕಾರಣದಿಂದ ಕೈಗೂಡಲಿಲ್ಲ. ಬಳಿಕ ಸದನದಲ್ಲಿ ನಡೆದ ವಿದ್ಯಮಾನಗಳಿಂದ ಬೇಸತ್ತ ಪ್ರತಾಪಚಂದ್ರಶೆಟ್ಟಿ ದೂರದ ಉಡುಪಿಯಲ್ಲಿ ಕುಳಿತೇ ಸರ್ಕಾರದ ಕಾರು-ಬಂಗಲೆಗಳಿಗೆ ಗುಡ್‌ಬೈ ಹೇಳಿ ನೈತಿಕತೆ ಪ್ರದರ್ಶಿಸಿದ್ದರು. 4 ಬಾರಿ ವಿಧಾನಸಭೆ ಶಾಸಕರಾಗಿ 3 ಸಲ ಸ್ಥಳೀಯ ಸಂಸ್ಥೆಗಳಿಂದ ಮೇಲ್ಮನೆ ಪ್ರವೇಶಿಸಿದ್ದ ಶೆಟ್ಟಿ ಅವರ ಸುದೀರ್ಘ ರಾಜಕಾರಣದ ಅನುಭವವೇ ಸಭಾಪತಿ ಸ್ಥಾನಕ್ಕೆ ಅನಿರೀಕ್ಷಿತವಾಗಿ ಕರೆತಂದಿತ್ತು. ಇದೀಗ ಬದಲಾದ ವಿದ್ಯಮಾನಗಳಿಂದಾಗಿ ಜಂಟಿ ಅಧಿವೇಶನದ ಮಾರನೇ ದಿನವೇ ಉಪಸಭಾಪತಿ ಚುನಾವಣೆ ನಡೆಸಿದ ಬಳಿಕ ಅವರಿಗೇ ರಾಜೀನಾಮೆ ನೀಡುವ ಸಾಧ್ಯತೆ ದಟ್ಟವಾಗಿದೆ. ಹಾಗಾಗಿ ನಿಷ್ಠುರವಾದಿ ರಾಜಕಾರಣಿಯೊಬ್ಬರು ರಾಜಕೀಯ ಪರಿಸ್ಥಿತಿ ಮತ್ತು ಪ್ರತಿಷ್ಠೆಯ ಒತ್ತಡಕ್ಕೆ ಸಿಲುಕಿ ಪಟ್ಟ ಕಳೆದುಕೊಳ್ಳಬೇಕಾಗಿ ಬಂದಿರುವುದು ಮಾತ್ರ ವಿಪರ್ಯಾಸವೇ ಸರಿ.



# ರೂಲ್ಸ್ ಕಮಿಟಿ ಪಾತ್ರ ಮುಖ್ಯ

ಮೇಲ್ಮನೆಯಲ್ಲಿ ನಡೆದ ಗಲಾಟೆ ಪರಿಷತ್ತಿನ ಇತಿಹಾಸಕ್ಕೆ ಅಂಟಿದ ಕಪ್ಪುಚುಕ್ಕೆ. ಈ ಘಟನೆಯಿಂದ ಮೇಲ್ಮನೆಯ ಘನತೆಗೆ ಸಹಜವಾಗಿಯೇ ಕುಂದುಂಟಾಗಿದೆ. ಕುಸಿದಿರುವ ಪರಿಷತ್ತಿನ ಘನತೆಯನ್ನು ಮತ್ತೆ ಎತ್ತಿಹಿಡಿಯಲೇಬೇಕಿದೆ. ಆ ದೆಸೆಯಲ್ಲಿ ಹಲವು ಉಪಕ್ರಮಗಳು ಇಂದಿನ ತುರ್ತು ಅವಶ್ಯ.



ಇಂತಹ ಸಂದಿಗ್ಧ ಸಂದರ್ಭದಲ್ಲಿ ಮೇಲ್ಮನೆಯಲ್ಲಿರುವ ರೂಲ್ಸ್ ಕಮಿಟಿಯ (ನಿಯಮಾವಳಿಗಳ ಸಮಿತಿ) ಪಾತ್ರ ಬಲು ಮುಖ್ಯ. ಈ ಹಿಂದೆ ಮೇಲ್ಮನೆಯ ಸದಸ್ಯರಲ್ಲದವರನ್ನು ಸಭಾನಾಯಕರಾಗಿ ಮಾಡುತ್ತಿದ್ದ ಪದ್ಧತಿಯನ್ನು ಇದೇ ರೂಲ್ಸ್ ಕಮಿಟಿಯ ಶಿಫಾರಸಿನ ಮೇರೆಗೆ ಮೇಲ್ಮನೆಯ ಸದಸ್ಯರು ಹಾಗೂ ಸಚಿವರೂ ಆಗಿರುವವರು ಮಾತ್ರ ಸಭಾನಾಯಕರಾಗುವಂತೆ ಹೊಸ ನಿಯಮಾವಳಿಯನ್ನು ಜಾರಿಗೆ ತರಲಾಯಿತು.

ಅಂತೆಯೇ ಸದನದ ನಡಾವಳಿಗಳ ನಿಯಮಾವಳಿಗಳ (ರೂಲ್ಸ್ ಆಫ್ ಪ್ರೊಸಿಜರ್) ಅನ್ವಯ ಸಭಾಪತಿ ಅವರು ಹೊಸದಾಗಿ ರೂಲ್ಸ್ ಕಮಿಟಿ ರಚಿಸಬೇಕು. ಮೂರು ರಾಜಕೀಯ ಪಕ್ಷಗಳ ಸದಸ್ಯರು ಈ ಕಮಿಟಿಯಲ್ಲಿರುವಂತೆ ನೋಡಿಕೊಳ್ಳಬೇಕು. ಈ ಸಮಿತಿಯು ಸಭೆ ಸೇರಿ ಮೇಲ್ಮನೆಯಲ್ಲಿ ನಡೆದ ಗಲಾಟೆಯನ್ನು ಪರಾಮರ್ಶಿಸುವುದರ ಜೊತೆಗೆ ಇಂತಹ ಕಹಿಘಟನೆಗಳು ಮತ್ತೆ ಮರುಕಳಿಸದಂತೆ ಏನು ಮಾಡಬೇಕೆಂಬುದರ ಚಿಂತನೆ ನಡೆಸಬೇಕು. ಆ ಚಿಂತನಮಂಥನ ದಲ್ಲಿ ಹೊರಹೊಮ್ಮುವ ಸಲಹೆಗಳನ್ನು ಆಧರಿಸಿ ಸಮಿತಿಯು ಹಲವು ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸಮಿತಿಯ ಅಧ್ಯಕ್ಷರಾದ ಸಭಾಪತಿ ಅವರಿಗೆ ಸಲ್ಲಿಸಬೇಕು. ಸಭಾಪತಿಗಳು ಈ ವರದಿಯನ್ನು ಸದನದಲ್ಲಿ ಮಂಡಿಸಿ ಚರ್ಚೆಗೊಳಪಡಿಸಿ ಸರ್ವ ಸದಸ್ಯರ ಸಮ್ಮತಿ ಪಡೆಯಬೇಕು. ಅನಂತರ ರೂಲ್ಸ್ ಕಮಿಟಿಯ ಶಿಫಾರಸ್ಸಿನನ್ವಯ ಮುಂಬರುವ ದಿನಗಳಲ್ಲಿ ಇಂತಹ ಘಟನೆಗಳು ಜರುಗದಂತೆ, ಜರುಗಿದರೂ ಕಠಿಣ ಕ್ರಮ ಕೈಗೊಳ್ಳುವಂತೆ ನೋಡಿಕೊಳ್ಳಬೇಕು. ಸದ್ಯಕ್ಕೆ ಮಾತ್ರವಲ್ಲ, ಸದಾಕಾಲಕ್ಕೂ ಮೇಲ್ಮನೆಯ ಘನತೆ ಹೆಚ್ಚಳಕ್ಕಿರುವ ಏಕೈಕ ಪರಿಹಾರವಿದು.

■ **ವಿ.ಆರ್.ಸುದರ್ಶನ್** | ಮಾಜಿ ಸಭಾಪತಿ